Reg No B C 155

22 — 4 —72

55 th Year of Publication ★ 'Satyavadi' Daily, Mysore 4

In the State - The First

Golden Jubilee

Celebrated Paper

★

News, Views, Dharmic
Moral Ethical Matters



ರಾಷ್ಟ್ರದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ತಿರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಶ್ರೀ ಚಾರುನಿರ್ಮಿತ ಎಂ.ಎಸ್. ಕೃಷ್ಣರಾವ್ [2 ಪೈಸೆ

ತುರ್ತು ಪರಿಸ್ಥಿತಿಯನ್ನು ತೆಗೆಯುವುದಿಲ್ಲ

ಪ್ರಶ್ನೋತ್ತರ

ಪ್ರ— ದೇವರು ಸೊಳ್ಳೆ ತಿಗಣೆಗಳನ್ನು ಮನುಷ್ಯನ ರಕ್ತ ಹೀರಲೆಂದೇ ಸೃಷ್ಟಿಸಿದ್ದಾನೆನು?

ಉ— ಇಲ್ಲ ; ಸೊಳ್ಳೆ ತಿಗಣೆಗಳಿಗೆ ಆಹಾರವಾಗಲೆಂದು ಮನುಷ್ಯರನ್ನು ಸೃಷ್ಟಿಸಿದ್ದಾನೆ.

ಪ್ರ— ಈಗ ಭಾರತದ ರೂಪಾಯಿಯ ನಿಜವಾದ ಬೆಲೆ ಎಷ್ಟು?

ಉ— ಹೇಳುವುದು ಕಷ್ಟ ; ಏನು ಹೇಳಿದರೂ, ಈ ಉತ್ತರವನ್ನು ನೀವು ಓದುವ ಹೊತ್ತಿಗೆ ಅಷ್ಟೆ ಇನ್ನೂ ಇಳಿದುಹೋಗಿರುತ್ತದೆ

ಪ್ರ— ಬೇರೆ ದೇಶಗಳಲ್ಲಿ ಭಿಕ್ಷುಕರಿಲ್ಲ, ನಮ್ಮ ದೇಶದಲ್ಲಿ ಮಾತ್ರಾ ಇದ್ದಾರಲ್ಲಾ ?

ಉ— ನಮ್ಮ ದೇಶವೇ ಇತರ ದೇಶಗಳ ಮುಂದೆ ಭಿಕ್ಷೆ ಬೇಡುತ್ತಿರುವಾಗ, ದೇಶದ ಒಳಗೂ ಭಿಕ್ಷುಕರು ಹೆಚ್ಚಾಗುವುದರಲ್ಲಿ ಆಶ್ಚರ್ಯವೇನಿಲ್ಲ.

●

ಕಾಶ್ಮೀರ

ನವದೆಹಲಿ— ಕಾಶ್ಮೀರ ವಿಷಯದಲ್ಲಿ ಪಾಕಿಸ್ತಾನದೊಡನೆ 1962 ಮತ್ತು 63 ರ ಪ್ರಾತಂಭದಲ್ಲಿ ಚರ್ಚಿಸಿದ ಯೋಜನೆಯ ಬಗ್ಗೆ ಭಾರತ ಬದ್ಧವಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಅಕ್ರಮ ವಸ್ತುಗಳು

ಬೆಂಗಳೂರು— ಮಾರ್ಚ್ ತಿಂಗಳಲ್ಲಿ ಮೈಸೂರು ರಾಜ್ಯದಲ್ಲಿ ಕೇಂದ್ರದ ಎಕ್ಸೈಸು ನವರು ರೂ 31 8 ಲಕ್ಷ ಬೆಲೆಯ ಚಿನ್ನ ವೂ ಸೇರಿ ಅಕ್ರಮ ವಾಣಿಜ್ಯ ಪದಾರ್ಥಗಳನ್ನು ವಶಪಡಿಸಿಕೊಂಡರು

ಹಿಂದೂ ದೇಶ

ಓ..... ಓ..... ಓ..... ಓ

ಹಿಂದೂ ದೇಶ ಚಂಡ ದೇಶವು
ಸ್ವಾಧುಸಂತರ ಜನ್ಮ ಭೂಮಿ
ಸತ್ಯ ಶಾಂತಿಯ ಪುಣ್ಯದ ಭೂಮಿ
ಈ ದೇಶದಲ್ಲಿ ನಾನೇ ಮೆರೆಯುವಲ್ಲಿ ॥

ಗಂಗಾ ಸಿಂಧುವು ಹರಿದಿಹ ನಾಡು
ಹಣ್ಣು ಹಂಪಲಾ ತುಂಬಿದ ಕಾಡು
ನೋಡು ಪಚ್ಚೆ ಪೈರು ಎಲ್ಲೆಲ್ಲಿ ಹಸರು ॥

ಪ್ರಕೃತಿ ಸೌಂದರ್ಯ ತುಂಬಿದ ಕಾಶ್ಮೀರ
ಶಿಲ್ಪ ಕಲೆಗಳ ಜನ್ಮದ ಶಿಖರ
ನೋಡು ಆ ಬೇಲೂರು, ನೋಡು ಈ ಹಳೆ
ಬೀಡು ॥

ವಿದೇಶಿಯರ ಸೆಳೆದಿಹ ನಾಡು
ಚಿನ್ನ ಬೆಳ್ಳಿಯ ಹೊತ್ತಿಹ ಬೀಡು
ನಮ್ಮ ದೇಶವಿದು, ಹಿಂದೂ ದೇಶವಿದು ॥

ಶೂರ ವೀರರು ಹುಟ್ಟಿದ ನಾಡು
ಶತ್ರುಗಳದ್ದುಣರು ನೆಲಸಿದ ಬೀಡು
ಚಂಡ ದೇಶವಿದು ಅಂದ ದೇಶವಿದು ॥

ನಮ್ಮ ದೇಶದ ಈ ರಕ್ಷಣೆಯೇ ಬೇಕು
ಅದಕ್ಕೆಲ್ಲಾ ನಾವ್ ಒಂದುಗೂಡಬೇಕು
ದೇಹ ಸವೆಸಲೇ ಬೇಕು, ನಾವ್ ದುಡಿಯಲೇಬೇಕು ॥

[ಕೃಷಿ ಸಂಘಟನೆ]

★

ಪುರಸಭೆ

ಮೈಸೂರು— ಈ ಮಾಹೆಯ ಸಾಧಾರಣ ಪುರಸಭಾಧಿವೇಶನವು ತಾ ॥ 28 ನೇ ಶುಕ್ರವಾರ ಮಧ್ಯಾಹ್ನಾ 2ರ 4 ಘಂಟೆಗೆ ನಡೆಯುವುದಾಗಿದೆ.

●

ಸಶ್ಚಿಮ ಬಂಗಾಳದ ಸ್ಥಾನಬದ್ಧರನ್ನು ವಾಪ್ರಾಸಿಗೆ ಕಳಾನೆ ಮಾಡುವ ಪ್ರಯತ್ನ ಇಂದೆ

ದಿನಾಚರಣೆ

ಕ್ರಿಸ್ತಪೂರ್ವ 753 ರಲ್ಲಿ ಸ್ಥಾಪನೆ ಆದ ರೋಂ ನಗರದ 2725 ನೇ ಜನ್ಮ ದಿನೋತ್ಸವನ್ನನ್ನು ಶುಕ್ರವಾರ ಆಚರಿಸಲಾಯಿತ್ತು.

○

ಸರ್ಕಾರದ ವಶಕ್ಕೆ

ಬಿಹಾರದ 5 ವಿಶ್ವವಿದ್ಯಾನಿಲಯದ ಆಡಳಿತವನ್ನು ಸರ್ಕಾರ ವಶಪಡಿಸಿಕೊಂಡಿರುವುದಾಗಿ ಪಾಟ್ನಾ ವಾರ್ತೆ.

★

ಕಾರು ಬಹುಮಾನ

ಭದ್ರಾವತಿಯ ಸೌರಭ ಈ ತಿಂಗಳು 24 ನೇ ತಾ॥ ಮಲ್ಲಾಡಿಹಳ್ಳಿಯ ಶ್ರೀ ರಾಘವೇಂದ್ರ ಸ್ವಾಮಿಯವರಿಗೆ ಅಂಬಾಸಿಡರ್ ಕಾರನ್ನು ತಿರ್ಲಾಣ ಮಂತ್ರಿ ಶ್ರೀಮದೀನಾತಾಯಣರ ಮೂಲಕ ಕೊಡಿಸುವರು.

○

ನರಹಳ್ಳಿ ಅಣೆಕಟ್ಟು

ಬೆಂಗಳೂರು— ಬಳ್ಳಾರಿ ಜಿಲ್ಲೆ ಸಂಡೂರಿನ ಹತ್ತಿರದ ರೂ 19 ಕೋಟಿಯ ನರಹಳ್ಳಿ ಅಣೆಕಟ್ಟಿನ ಕಾರ್ಯ ಕೈಗೊಳ್ಳಲು ಮಂತ್ರಿಮಂಡಲ ನಿರ್ಧರಿಸಿದೆ.

●

ಭೂ ಪರಿಮಿತಿ

ಮೈಸೂರು— ವರ್ಷಕ್ಕೆ 3 ಬೆಳೆ ತೆಗೆಯಲ್ಪಡುವ 10 ರಿಂದ 18 ಎಕ್ರೆ ಭೂಮಿ 5 ಮಂದಿಯ ಸಂಸಾರಕ್ಕೆ ಭೂ ಪರಿಮಿತಿ ಎಂದು ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ಹೇಳಿದರು — ಒಂದು ಸಂಸಾರಕ್ಕೆ ಹೆಚ್ಚೂ ಹೆಚ್ಚೂ 10 ಎಕ್ರೆ ಪರಿಮಿತಿ ಎಂದೂ ತಿಳಿಸಿದರು.

ನವದೆಹಲಿಯಿಂದ ಬಂದಿರುವ ವರದಿಯಂತೆ, ಪಶ್ಚಿಮ ಗಡಿಯಲ್ಲಿ ಇನ್ನೂ ಎಚ್ಚರಿಕೆಯಿಂದ ಇರಬೇಕಾಗಿರುವ ಕಾರಣ ಸಧ್ಯಕ್ಕೆ ರಾಷ್ಟ್ರೀಯ ತುರ್ತು ಪರಿಸ್ಥಿತಿ ತೆಗೆಯುವುದಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಆಗಮನ

ನೇಪಾಳದ ಪ್ರಧಾನಿ ಕೀರ್ತಿನಿಧಿ ಬಿಷ್ಟರವರು ಮೈಸೂರಿಗೆ ಇಂದು ಬಂದು ಸಂಜೆ ಬೃಂದಾವನಕ್ಕೆ ಭೇಟಿಕೊಡುವರು ನಾಳೆ ಬೇಲೂರು ಹಾಗೂ ಹಳೇಬೀಡಿಗೆ ಭೇಟಿ ಕೊಡಲು ಹಾಸನಕ್ಕೆ ತೆರಳುವರು.

★

ಮುಸೂದೆ ಪುಣೆಯಿನ ಅಧಿವೇಶನಕ್ಕೆ

ಲೋಕ ಆಯುಕ್ತ ಮಸೂದೆಯನ್ನು ಪುಣೆಯಿನ ಅಧಿವೇಶನದಲ್ಲಿ ತರಲು ಸರ್ಕಾರ ನಿರ್ಧರಿಸಿದೆ.

★

ಇಬ್ಬರ ಸಾವು

ಕೊಟ್ಟಾಯಂನಿಂದ ಬಂದಿರುವ ವರದಿಯಂತೆ ಚಂಗನಚೆರಿಯಲ್ಲಿ ವಿಂಚಿನ ಹೊಡೆತದಿಂದ ಇಬ್ಬರು ಸತ್ತರು.

○

ಪ್ರಧಾನರ ಆಶ್ವಾಸನೆ

ರಾಷ್ಟ್ರೀಯ ಪತ್ರಿಕೆಗಳನ್ನು ಕೊಲ್ಲುವ ಇಚ್ಛೆ ಸರ್ಕಾರಕ್ಕೆ ಇಲ್ಲವೆಂದು ಪತ್ರಿಕೆಯ ಸಂಘದಲ್ಲಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ನವದೆಹಲಿಯಲ್ಲಿ ತಿಳಿಸಿದರು.

ವಿರೋಧ

ಮಠಗಳ ಭೂ ಮಿತಿಯನ್ನು ಉತ್ತರಾದಿ ಮಠದ ಸ್ವಾಮಿಗಳು ವಿರೋಧಿಸಿರುವರೆಂದು ಬೆಂಗಳೂರು ವಾರ್ತೆ.

ಗಂಗಾ ಮಹಿಮೆ

ಕೆಲವು ವರ್ಷಗಳ ಹಿಂದಿನ ವಿಷಯ. ಜೆಕೊಸ್ಲೋವಿಯಾದ ಮಹಿಳೆ ಹೆಸ್ನಾ ಸ್ಲೆರ್ಟ್‌ಕಾವಾ ಎಂಬುವವರು, ಟಿ ಗೋರರ 'ಸಾರ್ಥಕ ಜನಂ ಅಮರ್, ಜನ್ಮೇಚಿ ಏ ದೇಶೇ' ಎಂಬ ಹಾಡನ್ನು ಕೇಳಿ ಆನಂದಗೊಂಡು, ಅಲ್ಲಿ ಡಾ || ಜೆಚ್ಚಿಟಲರಲ್ಲಿ ಬಂಗಾಳೀ ಭಾಷೆ ಕಲಿತು. ಪ್ರಾಗ್‌ನ ಚಾರ್ಲೆಸ್ ವಿಶ್ವವಿದ್ಯಾಲಯದಲ್ಲಿ ಬಂಗಾಳೀ ಭಾಷಾ ಉಪಾಧ್ಯಾಯಿನಿಯಾದರು. ಅವರು ಭಾರತದ ಕಲ್ಕತ್ತಾಕ್ಕೆ ಬಂದಕೂಡಲೇ ದಕ್ಷಿಣೇಶ್ವರದಲ್ಲಿ ಪವಿತ್ರ ಗಂಗೆಯಲ್ಲಿ ಸ್ನಾನಮಾಡಿದರು : ನಂತರ ಕುಮಾತಲಿಯಲ್ಲಿ ದುರ್ಗಾವಿಗ್ರಹ ನೋಡುವ ಕಾರ್ಯಕ್ರಮ ಹೊಂದಿದ್ದರು ಪವಿತ್ರ ಸ್ನಾನಾನಂತರ ನದಿಯಿಂದ ಬಂದ ಅವರು " ನಾನು ಪುನಃ ಹುಟ್ಟಿದಂತಿದೆ " ಎಂದು ಹೇಳಿದರು.

ಶಾಸ್ತ್ರವು ಹೇಳುತ್ತದೆ– ಗಂಗಾ ನೀರು ಪವಿತ್ರವಾದುದು ; ಪವಿತ್ರ ಗಂಗೆಯಲ್ಲಿ ಸ್ನಾನಮಾಡಿದರೆ, ಒಬ್ಬನು ಅನೇಕ ಪುಣ್ಯಗಳನ್ನು ಪಡೆಯುತ್ತಾನೆ, ಮತ್ತು ಅತನ ಅನೇಕ ಜನ್ಮಗಳ ಪಾಪಗಳು ಪರಿಹಾರವಾಗುತ್ತದೆ. ಮಾನವನನ್ನು ಗಂಗಾನದಿಯಲ್ಲಿ ಸ್ನಾನಮಾಡುವ ಗೌರವಯುತ ಇಚ್ಛೆಯಿಂದ ಹೊರಟಿನೆ. ಅವನ ಪ್ರತಿ ಹೆಜ್ಜೆಯಲ್ಲೂ ಅಶ್ವಮೇಧಯಾಗ ಮಾಡಿದ ಪ್ರಯೋಜನ ಹೊಂದುತ್ತಾನೆ.

★

ಭಾರತದಲ್ಲಿ ಪ್ರತಿಯೊಗ ಜನಿಸುವ ಮಗು ಸುಮಾರು 52 ವರ್ಷಗಳ ಜೀವಿಸುವ ನಿರೀಕ್ಷೆ ಇದೆ, ಎರಡು ಶತಕಗಳ ಹಿಂದೆ ಭಾರತೀಯರ ವಯೋಮಾನ ಕೇವಲ 32 ವರ್ಷಗಳಷ್ಟಿತ್ತು. ಎಂದು ಸ್ಪಷ್ಟವಾಗಿದೆ

ಸೈಗಾನಿಂದ ಬಂದಿರುವ ವರದಿಯಂತೆ ಅಂತರರಾಷ್ಟ್ರೀಯ ಹೆತೋಟಿ ಆಯೋಗದಲ್ಲಿನ ಭಾರತ ನಿಯೋಗವನ್ನು ಹೊರದೊಡಬೇಕೆಂದು ದಕ್ಷಿಣ ವಿಯಟ್ನಾಂ ಸರಕಾರಕ್ಕೆ ರಾಷ್ಟ್ರೀಯ ಸಭೆಯ ವಿದೇಶ ಸಂಬಂಧ ಸಮಿತಿ ತಿಳಿಸಿದೆ.

ವುಡ್‌ಲ್ಯಾಂಡ್ 21 4 72 ರಿಂದ ಆಮೋಘ ಪ್ರಾರಂಭ

ವರ್ಣರಂಜಿತ ಹಿಂದಿ ಚಿತ್ರ

ಮೇರೆ ಹಮ್‌ಸಫರ್

ಪಾತ್ರ : ಜಿತೇಂದ್ರ, ಶರ್ಮಿಳಾ ಟಾಗೂರ್, ಬಾಲರಾಜ ಸಹಾನಿ

ನಿರ್ದೇಶನ – ದುಲಾಲ್ ಗುಹ ಸಂಗೀತ – ಕಲ್ಯಾಣಜಿ ಆನಂದಜಿ

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ : ಪ್ರತಿದಿನ 10-30 ಶಿಕಸ್ತ್

ಅಪೆರಾ 2 ನೇ ವಾರ

.... ಅತ್ಯಮೋಘ ಕನ್ನಡ ಚಿತ್ರ ....

ಯಾವ ಜನ್ಮದ ಮೈತ್ರಿ

ತಾರಾಗಣ— ಗಂಗಾಧರ್, ಕೆ. ಎಸ್. ಅಶ್ವತ್ಥ್, ಕಲ್ಪನಾ

ಸಂಗೀತ : ವಿಜಯಭಾಸ್ಕರ ಚಿತ್ರಕಥೆ – ನಿರ್ದೇಶನ : ಗೀತಪ್ರಿಯ

Contribute Liberally

to the National Defence Fund

Help The Gorakshana

— Humanitarian Propoganda Monthly ....

Protect the Cow

Quality Print & Neat Binding

Lakshminarasimha Press

Sivarampet, Mysore

' ಮಾನವನು ಕೀಳು ಸೃಷ್ಟಿಯು ಹೌದು, ಶ್ರೇಷ್ಠವೆನ್ನುವುದು ಸೊಕ್ಕಿನ 'ಕಲ್ಪನೆ' ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಪ್ರಾಣಿಗಳಾವ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

ಅನು – ಹುಡುಗ

ಹೊಸ ರೀತಿಯ ತಿಳುವಳಿಕೆ ಕೊಡುವ ಆಕರ್ಷಣೀಯ ಚಿತ್ರ

ಕುಟುಂಬ ಯೋಜನ

ದೇಶ ಹಿತಕ್ಕಾಗಿ

SHAKTI

SUDHA

A Superb Tonic

Edited Printed and Published by Dharmapracharanirata M S Krishna Rao (Proprietor) at the Satyavadi Press Chamarajapuram [illegible] 4